೫) ೧೯೮೦–೮೧ನೇ ಸಾಲಿನಿಂದ ೧೯೮೭–೮೮ನೇ ಸಾಲಿನವರೆಗೆ (೩೦–೪–೧೯೮೮ರವರೆಗೆ) ೩೦೮೮ ಸಾಲದ ಅರ್ಜಿಗಳು ಬ್ಯಾಂಕಿಗೆ ಬಂದಿರುತ್ತವೆ. ಈ ಅವಧಿಯಲ್ಲಿ ೧೮೭೧ ಹೊಸ ಸದಸ್ಯರಿಂದ ಪಾಲು ಬಂಡವಾಳ ವಸೂಲಾಗಿರುತ್ತದೆ. ಪಾಲು ಬಂಡವಾಳ ವಸೂಲಾಗಿಯೂ ಸಾಲ ನೀಡದ ೩೪ ಸಾಲದ ಅರ್ಜಿಗಳು ಬ್ಯಾಂಕಿನಲ್ಲಿ ವಿಲೇವಾರಿಯಾಗದೇ ಬಾಕಿ ಇವೆ. ಇದರಲ್ಲಿ ೧೧೪ ಅರ್ಜಿಗಳು ಮಂಜೂರಾತಿ ಹಂತದಲ್ಲಿದ್ದು, ೨೦ ಅರ್ಜಿಗಳು ಸಾಲದ ದಾಖಲಾತಿಗಳು ಬಾರದಿರುವುದರಿಂದ, ತಾಂತ್ರಿಕ ವರದಿ ಬಾರದೆ ಇರುವುದು ಮುಂತಾದ ಅನೇಕ ಕಾರಣಗಳಿಂದ ವಿಲೇವಾರಿಯಾಗದೇ ಬಾಕಿ ಇರುತ್ತವೆ.

ಶ್ರೀ ಕೆ. ಕುಶಾಲ.— ಸಚಿವರು ಕೊಟ್ಟಿರುವ ಉತ್ತರದಂತೆ ೩೦೮೮ ಸಾಲದ ಅರ್ಜಿಗಳು ಬಂದಿದ್ದರೂ ಅವಕ್ಕೆ ಏಕೆ ಸಾಲ ಮಂಜೂರು ಮಾಡಲಿಲ್ಲ. ಹೊಸ ಸದಸ್ಯರಿಂದ ಪಾಲು ಬಂಡವಾಳವೂ ವಸೂಲಾಗಿದೆ. ಆದರೆ ಹೊಸ ಅರ್ಜಿದಾರರಿಗೆ ಮಾತ್ರ ಸಾಲ ನೀಡುವಲ್ಲಿ ಪರಿಗಣನೆ ಮಾಡುತ್ತಿದ್ದೀರಿ. ೩೪ ಸಾಲದ ಅರ್ಜಿಗಳು ವಿಲೇವಾರಿಯಾಗದೆ ಉಳಿಯಲು ಕಾರಣಗಳೇನು ? ಸಾಲಕ್ಕಾಗಿ ಬಹಳ ದಿವಸದಿಂದಲೂ ಅರ್ಜಿದಾರರು ಕಾದಿದ್ದಾರೆ. ಆಮೇಲೆ ನಮ್ಮ ಸುಳ್ಯ ಸಹಕಾರ ಪ್ರಾಥಮಿಕ ಬ್ಯಾಂಕ್ ಅಧ್ಯಕ್ಷರು ೨೦ ವರ್ಷಗಳಿಂದಲೂ ಅಲ್ಲೇ ಇದ್ದಾರೆ. ನಿಮ್ಮ ಕಾನೂನಿನಂತೆ ೫ ವರ್ಷಕ್ಕೆ ಮೇಲ್ಪಟ್ಟು ಇರುವಂತಿಲ್ಲ.

ಶ್ರೀ ಎಚ್. ಏಕಾಂತಯ್ಯ.— ೨೦ ವರ್ಷದಿಂದ ಇದ್ದಾರೆಂದು ಹೇಳುವುದು ನಿಜವಲ್ಲದಿರಬಹುದು. ಆದರೂ ಆರೋಪವನ್ನು ಪರಿಶೀಲನೆ ಮಾಡುತ್ತೇನೆ. ಇನ್ನು ೧೯೮೦–೮೧ರಿಂದ ೮೭–೮೮ರವರೆಗಿನ ಅವಧಿಯಲ್ಲಿ ಬಂದ ಅರ್ಜಿಗಳು ೩೦೮, ಅದರಲ್ಲಿ ೩೭೩ ಅರ್ಜಿಗಳು ತಿರಸ್ಕೃತವಾಗಿವೆ, ಕೇವಲ ೩೪ ಅರ್ಜಿಗಳು ಮಾತ್ರ ಉಳಿದಿವೆ. ಅದರಲ್ಲಿ ೧೪ ಮಂಜೂರಾತಿ ಹಂತದಲ್ಲಿದ್ದು ಇನ್ನುಳಿದ ೨೦ ಅರ್ಜಿಗಳು ಅಪೇಕ್ಷಿತ ಕಾಗದ ಪತ್ರಗಳನ್ನು ಪೂರೈಸದಿರುವುದರಿಂದ ಸ್ಥಗಿತವಾಗಿವೆ. ಅವು ಪೂರೈಕೆಯಾದ ಮೇಲೆ ಪರಿಗಣಿಸಲಾಗುವುದು.

ಶ್ರೀ ಕೆ.ಕುಶಾಲ: — ಎಲ್ಲ ದಾಖಲಾತಿಗಳನ್ನು ಕೊಟ್ಟ ಮೇಲೂ ಕೆಲವು ಅರ್ಜಿಗಳು ಹಾಗೇ ಉಳಿದಿವೆ. ಇವನ್ನು ಬೇಗ ಮುಗಿಸಬೇಕು.

ಹೈದರಾಬಾದ್–ಕರ್ನಾಟಕ ಪ್ರದೇಶದ ಅಭಿವೃದ್ಧಿ

೨೬೧೦. ಶ್ರೀ ವಿಶ್ವನಾಥ್‌ಪಾಟೀಲ್ ಹೆಬ್ಬಾಳ (ಚಿತ್ತಾಪುರ).— ಮಾನ್ಯ ಕಂದಾಯ ಯೋಜನೆ, ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೈದರಾಬಾದ್ ಕರ್ನಾಟಕ ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗಾಗಿ ವಿಶೇಷ ಮಂಡಳಿ ರಚಿಸುವಂತೆ ಕೇಳಿದ ಪ್ರಶ್ನೆ ಉತ್ತರಿಸುವಾಗ ತಾವು ಸಂಬಂಧಪಟ್ಟ ಎಲ್ಲಾ ಶಾಸಕರೊಂದಿಗೆ ಚರ್ಚಿಸುವುದಾಗಿ ಆಶ್ವಾಸಿದ್ದು ನೆನಪಿದೆಯೇ ?

ಆ) ಇಲ್ಲಿಯವರೆಗೆ ಈ ಕುರಿತು ಯಾವ ಸಭೆಯಾಗಿಲ್ಲ ಹಾಗೂ ತಾವು ನಮ್ಮೊಂದಿಗೆ ಯಾವ ಚರ್ಚೆಯನ್ನೂ ಮಾಡಿಲ್ಲದಿರುವುದು ನಿಜವೇ ?

ಇ) ಮುಂದಿನ ಏಳು ವರ್ಷಗಳಲ್ಲಿ (ಎಂಟನೆಯ ಯೋಜನೆ ಒಳಗೊಂಡಂತೆ) ವರ್ಷ ಕನಿಷ್ಠ ೧೦೦ ಕೋಟಿ ರೂಪಾಯಿ ಹೈದರಾಬಾದ್ ಕರ್ನಾಟಕದ ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗೆ ಹಣ ಒದಗಿಸಲು ಕ್ರಮ ಕೈಗೊಳ್ಳುವಿರಾ ?

ಈ) ಸ್ವಾಯತ್ತ ಅಧಿಕಾರ ಹೊಂದಿ ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ರಚಿಸುವ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ, ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು). —

ಅ) ನೆನಪಿದೆ.

ಆ) ಈ ಸಭೆಯನ್ನು ಕರೆಯಲ್ಪಡಂತ್ತದೆ.

ಇ) ಸಭೆಯಲ್ಲಿ ಚರ್ಚಿಸಲಾಗಂವುದು.

ಈ) ಈ ಸಭೆಯಲ್ಲಿ ಚರ್ಚಿಸಲಾಗುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.-- ಸಭೆಯನ್ನು ಮುಂದಿನ ಬುಧವಾರ ಕರೆಯುತ್ತಿದ್ದೇನೆ. ಹಿಂದಿನ ರಿಪೊರ್ಟ್ ಮತ್ತು ಮಾಹಿತಿಗಳು ಬೇಕಾಗಿದ್ದುವು.

ಶ್ರೀ ವಿಶ್ವನಾಥಪಾಟೀಲ್.— ಈ ಸಭೆಗೆ ಯೋಜನಾ ಇಲಾಖೆಯ ಮತ್ತು ಆರೋಗ್ಯ ಇಲಾಖೆಯ ಅಧಿಕಾರಿಗಳನ್ನು ಕರೆಸಲಾಗುತ್ತಿದೆಯೇ ? ಮತ್ತು ಕೇಂದ್ರಕ್ಕೆ ಇದರ ಬಗ್ಗೆ ಶಾಸಕರ ನಿಯೋಗವನ್ನು ಕರೆದುಕೊಂಡು ಹೋಗುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೀರಿ, ಈ ಪಂಚವಾರ್ಷಿಕ ಯೋಜನೆಯಲ್ಲಿ ವಿನಾದರೂ ವಿಶೇಷ ಹಣ ಕೊಡುವ ಉದ್ದೇಶ ಇದೆಯೇ?

ಶ್ರೀ ಎಸ್. ಆರ್. ಬೊಮ್ಮಾಯಿ.— ಈ ಸಭೆಗೆ ಸಂಬಂಧಪಟ್ಟ ಎಲ್ಲ ಅಧಿಕಾರಿಗಳನ್ನು ಕರೆಸಿ ಇತರ ವಿಷಯಗಳನ್ನೂ ಅಲ್ಲೇ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ರೈತರಿಗೆ ಜಮೀನು ಹಂಚಿಕೆ

೨೩೨೫. ಶ್ರೀ ಸಿ. ಎಂ. ರೇವಣಸಿದ್ದಯ್ಯ, (ಸಿರಗುಪ್ಪ).—ಮಾನ್ಯ ಕಂದಾಯ, ಯೋಜನೆ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ) ಹಳ್ಳಿಗಳ ಜನಸಂಖ್ಯೆ ಬೆಳೆದು ರೈತರಿಗೆ ಹಾಲಿ ಇರುವ ಸ್ಥಳ ಸಾಲದೆಂಬುದು ಸರ್ಕಾರಕ್ಕೆ ತಿಳಿದಿದೆಯೇ ?

ಆ) ಈ ರೈತರ ವಸತಿಗೆ ಜಾಗವಿಲ್ಲದೆ ತಿಪ್ಪೆಗಳಿಗೆ ಸ್ಥಳವಿರುವುದಿಲ್ಲ. ಪ್ರತಿ ಹಳ್ಳಿಗಳಲ್ಲಿ ಹೆಚ್ಚು ಜಾಗ ಸ್ವಾಧೀನ ಪಡಿಸಿಕೊಂಡು ರೈತರಿಗೆ ಹಂಚುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಕೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು).—

ಆ) ಇಲ್ಲ.

ಆ) ಇಲ್ಲ

ಇ) ಮೇಲಿನ ಉತ್ತರಗಳಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಹಳ್ಳಿಗಳಲ್ಲಿನ ಜನರಿಗೆ ಮನೆಗಳಿಗೆ ಬೇಕಾದಂತಹ ಸ್ಥಳ ಬೇಕಾಗಿದ್ದರೆ ಅಲ್ಲಿನ ಪಂಚಾಯತಿಯವರು ಜಿಲ್ಲಾ ಪರಿಷತ್ತಿನವರು ಸರಕಾರಕ್ಕೆ ಮನವಿ ಮಾಡಿಕೊಂಡಲ್ಲಿ ಅವರಿಂದ ಸೂಚನೆ ಬಂದರೆ ಮಾಡಿಕೊಡುತ್ತೇವೆ. ಇವು ಮಂಡಲ ಪಂಚಾಯತಿ ವ್ಯಾಪ್ತಿಗೆ ಬರುತ್ತವೆ. ಜನಸಂಖ್ಯೆ ಹೆಚ್ಚಿಗೆ ಆಗಿದೆ ಭೂಮಿ ಬೇಕು ಎಂದು ಅವರು ಸರಕಾರದ ಮುಂದೆ ಸೂಚನೆಯನ್ನು ಇಟ್ಟರೆ ಮಾಡಿಕೊಡುತ್ತೇವೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಹಿಂದೆ ಇರತಕ್ಕಂತಹ ಜನಸಂಖ್ಯೆಗೆ ಎರಡರಷ್ಟು ಜನಸಂಖ್ಯೆ ಈಗ ಬೆಳೆದಿದೆ. ನಿವೇಶನರಹಿತರಿಗೆ, ಭೂಹಿತರಿಗೆ ಭೂಮಿಯನ್ನು ಕೊಡತಕ್ಕಂತಹ ವ್ಯವಸ್ಥೆ ಕಾನೂನಿನಲ್ಲಿ ಇದೆ. ಒಂದು ಮನೆಯಲ್ಲಿ ೩-೪ ಜನ ಅಣ್ಣ ತಮ್ಮಂದಿರಾಗಿದ್ದಾರೆ ಅವರೆಲ್ಲರೂ ಒಂದೇ ಮನೆಯಲ್ಲಿ ವಾಸಮಾಡುತ್ತಿದ್ದಾರೆ. ಈ ಕಾರ್ಯಕ್ರಮವನ್ನು ಸರಕಾರ ಆದಷ್ಟು ಬೇಗ ತೀವ್ರಗತಿಯಲ್ಲಿ ಇಂಪ್ಲಿಮೆಂಟ್ ಮಾಡತಕ್ಕಂತಹ ಆದೇಶವನ್ನು ಕೊಡಬೇಕು. ಅಲ್ಲಿ ಜಾಗವಿಲ್ಲದೆ ತಿಪ್ಪೆಗಳಿಗೆ ಜಾಗವಿಲ್ಲ, ವಾಸಕ್ಕೆ ಜಾಗವಿಲ್ಲದಂತಾಗಿದೆ. ಮಂಡಲ ಪಂಚಾಯತಿಯಿಂದ ಜಿಲ್ಲಾಪರಿಷತ್ತಿನಿಂದ ಬೇಡಿಕೆ ಬಂದಾಗ ಸರಕಾರ ಶೀಘ್ರ ಗತಿಯಲ್ಲಿ ಅವರಿಗೆ ಭೂಮಿಯನ್ನು ಹಂಚುವ ವ್ಯವಸ್ಥೆ ಮಾಡಬೇಕು.